## 1

ಮಾರ್ಕ್ವೆಜ್‌ಗೆ ಎಪ್ಪತ್ತೆರಡು ವರ್ಷವಾಗಿದ್ದಾಗ ಲಿಂಫ್ಯಾಟಿಕ್ ಕ್ಯಾನ್ಸರ್ ಆಯಿತು. ಅದರಿಂದ ಬಚಾವಾದ ಮಾರ್ಕ್ವೆಜ್ ತನ್ನ ಆತ್ಮಚರಿತ್ರೆಯ ಮೊದಲ ಭಾಗ 'ಲಿವಿಂಗ್ ಟು ಟೆಲ್ ದಿ ಟೇಲ್' ಬರೆದು ತಾರುಣ್ಯದ ಘಟ್ಟದವರೆಗಿನ ಕತೆ ಹೇಳಿ ನಿಲ್ಲಿಸಿದ. ಮುಂದೆ ಇನ್ನೂ ಎರಡು ಸಂಪುಟ ಬರೆಯುವೆನೆಂದು ಘೋಷಿಸಿ ಸಾವಿಗೆ ಸವಾಲು ಹಾಕಲು ನೋಡಿದ. ಆಮೇಲೆ, 'ಇಷ್ಟೇ ಸಾಕು, ನಾನು ರೈಟರ್ ಹೇಗಾದೆ ಅನ್ನೋದನ್ನು ಹೇಳುವ ಘಟ್ಟದ ಕತೆ ಬಂದಿದೆ, ಸಾಕು.' ಅಂದ. 'ನನಗೆ ಎಂಟು ವರ್ಷ ಆದ ಮೇಲೆ ತೀರಾ ಕುತೂಹಲ ಹುಟ್ಟಿಸುವಂಥ ಯಾವುದೂ ನನ್ನ ಜೀವನದಲ್ಲಿ ನಡೆದಿಲ್ಲ' ಅನ್ನುತ್ತಾ ಸುಮ್ಮನಾದ. 'ಒಂದು ಮಟ್ಟದ ಯಶಸ್ಸು ಸಿಕ್ಕ ಮೇಲೆ ಸುಪ್ರಸಿದ್ಧರು ಬರೆಯುವ ಆತ್ಮಕತೆಯಲ್ಲಿ ಬರೀ ಅವರಿವರ ಹೆಸರು ಹೇಳೋದು, ಆ ಪೇಂಟರ್ ಸಿಕ್ಕಿದ್ದು, ಇವರು ಭೇಟಿಯಾಗಿದ್ದು, ದೊಡ್ಡ ಸೇನಾನಾಯಕನ ಜೊತೆ ಊಟ ಮಾಡಿದ್ದು...' ಇವೇ ಇರುತ್ತವೆ ಎಂಬ ಕಾರಣಕ್ಕೆ ಕೂಡ ಮಾರ್ಕ್ವೆಜ್ ಆತ್ಮಕತೆಯನ್ನು ಅಲ್ಲಿಗೇ ನಿಲ್ಲಿಸಿದ!

ಮುಂದೆ ಎಪ್ಪತ್ತೆಂಟನೆಯ ವಯಸ್ಸು ತಲುಪುವ ಹೊತ್ತಿಗೆ ಮಾರ್ಕ್ವೆಜ್ ಬರೆದ 'ಮೆಮೊರೀಸ್ ಆಫ್ ಮೈ ಮೆಲಂಕಲಿ ಹೋರ್ಸ್' (ನನ್ನ ಖಿನ್ನ ಸೂಳೆಯರ ನೆನಪುಗಳು) ಪುಟ್ಟ ಕಾದಂಬರಿಯ ಪುಟಪುಟದಲ್ಲೂ ಜೀವಚೈತನ್ಯ ಪುಟಿಯುತ್ತಿತ್ತು. ಹತ್ತಾರು ವರ್ಷಗಳಿಂದ ಜನ ಅವನ ಹೊಸ ಕಾದಂಬರಿಗಾಗಿ ಕಾಯುತ್ತಿದ್ದರು. ಕಾದಂಬರಿ ಬಿಡುಗಡೆಯಾಗುವ ಮೊದಲೇ ಅದರ ಕಳ್ಳ ಆವೃತ್ತಿಯ (ಪೈರೇಟೆಡ್ ಎಡಿಶನ್) ಲಕ್ಷಾಂತರ ಪ್ರತಿಗಳು ಹೊರಬಂದಾಗ ಪ್ರಕಾಶಕರು ಕಂಗಾಲಾದರು. ಈ 'ಕೃತಿ ದರೋಡೆ'ಯ ಸವಾಲಿಗೆ ಬತ್ತಿ ಇಡಲು ಮಾರ್ಕ್ವೆಜ್ ಒಂದು ಕಮಾಲ್ ಮಾಡಿದ. ಕೊಲಂಬಿಯಾದ ಮಾಂತ್ರಿಕ ವಾಸ್ತವತಾವಾದಿ ಕಾದಂಬರಿಕಾರ ತನ್ನ ಕಾದಂಬರಿಯ ಕೊನೆಯ ಅಧ್ಯಾಯವನ್ನೇ ಬದಲಿಸಿ ಬರೆದ. 'ಈ ಅಧ್ಯಾಯ ಇದ್ದರೆ ಮಾತ್ರ ಅದು ಒರಿಜಿನಲ್ ಕಾದಂಬರಿ!' ಎಂದು ಹೇಳಿ ಓದುಗರು ಅಧಿಕೃತ ಪ್ರಕಾಶಕರ ಕಾದಂಬರಿಯನ್ನೇ ಕೊಳ್ಳುವಂತೆ ಮಾಡಿದ.

2004ನೇ ಇಸವಿಯ ಮೇ ತಿಂಗಳಲ್ಲಿ ಬರೆದು ಮುಗಿಸಿದ 'ಮೆಮೊರೀಸ್' ಕಾದಂಬರಿಯಲ್ಲಿ ತೊಂಬತ್ತು ವರ್ಷದ ಅಂಕಣಕಾರ–ಸ್ಕಾಲರ್ ಪ್ರೇಮ, ಕಾಮದ ಮೂಲಕ ಮರುಜೀವಣಿ ಪಡೆಯುವ ಅಪರೂಪದ ಕತೆಯನ್ನು ಮಾರ್ಕ್ವೆಜ್ ಹೇಳಿದ್ದ. ಕಾದಂಬರಿಯ ಕೊನೆಯಲ್ಲಿ ತೊಂಬತ್ತನೇ ವರ್ಷ ದಾಟಿದ ನಾಯಕ ತನ್ನ ನೂರನೇ ಹುಟ್ಟುಹಬ್ಬದ ನಂತರ ಯಾವಾಗ ಬೇಕಾದರೂ ಸಾಯಲು ಸಂತೋಷದಿಂದ ರೆಡಿಯಾಗುವೆ ಎಂದುಕೊಳ್ಳುತ್ತಾನೆ.

ಆದರೆ, ಕಾದಂಬರಿ ಬರೆದ ಮಾರ್ಕ್ವೆಜ್‌ಗೆ ನೂರು ವರ್ಷ ಇರುವ ಭಾಗ್ಯ ಬರಲಿಲ್ಲ. ಮಾರ್ಕ್ವೆಜ್ 'ಮೆಮೊರೀಸ್' ಕಾದಂಬರಿ ಬರೆದು ಆರು ವರ್ಷ ಆಗಿತ್ತು. 2010–12ರ ನಡುವೆ ಹೊರಗೆಲ್ಲೂ ಹೆಚ್ಚು ಕಾಣಿಸಿಕೊಳ್ಳದ ಮಾರ್ಕ್ವೆಜ್ ಹೊಸ ಕಾದಂಬರಿ ಬರೆಯುತ್ತಿದ್ದಾನೆ ಎಂಬ ಸುದ್ದಿ ಹಬ್ಬಿತು. ಆದರೆ, ಸತ್ಯ ಬೇರೆಯೇ ಇತ್ತು. 'ಇಲ್ಲ, ಮಾರ್ಕ್ವೆಜ್ ಇನ್ನು ಬರೆಯಲಾರ. ಅವನಿಗೆ ಮರೆವಿನ ಕಾಯಿಲೆ (ಡಿಮೆನ್ಶಿಯಾ) ಆಗಿದೆ' ಎಂದು ಮಾರ್ಕ್ವೆಜ್ ಮನೆಯವರು ಜನರಿಗೆ ಹೇಳಲೇಬೇಕಾಯಿತು.

ಕಾದಂಬರಿಕಾರನ ಮೂಲ ದ್ರವ್ಯವಾದ ನೆನಪಿನ ಒರತೆ ಇನ್ನು ಎಂದೆಂದಿಗೂ ಬತ್ತಿ ಹೋಯಿತೆಂಬ ಕಠೋರ ಸ್ಥಿತಿಯೆದುರು ಮಾರ್ಕ್ವೆಜ್ ದಿಗ್ಭ್ರಮೆಗೊಂಡಿರಬಹುದೆ? ಅಥವಾ ಮತ್ತೆ ನೆನಪು ಬಂದೀತೆಂದು ಆಸೆ, ನಿರೀಕ್ಷೆಗಳಿಂದ ಜೀವ ಬಿಗಿಹಿಡಿದು ಕಾಯ್ದಿರಬಹುದೆ? ಯಾಕೆಂದರೆ, ಎಂಥ ಭೀಕರ ಸ್ಥಿತಿ ಕೂಡ ಮುಂದೊಮ್ಮೆ ಬದಲಾದೀತೆಂದು ಕೊನೆತನಕ ಕಾಯುತ್ತಲೇ ಇರುವುದು ಮಾನವ ಚೈತನ್ಯದ ಮಹಾ ವಿಸ್ಮಯಗಳಲ್ಲೊಂದು! ತನ್ನ ಮನೆತನದ ನೆನಪಿನ ಗಣಿಯಿಂದ ಮೂರು ತಲೆಮಾರುಗಳ ಕತೆ ಅಗೆದು ತೆಗೆದು, 'ಒನ್ ಹಂಡ್ರೆಡ್ ಯಿಯರ್ಸ್ ಆಫ್ ಸಾಲಿಟ್ಯೂಡ್' ಎಂಬ ಮಹಾಕಾದಂಬರಿ ಬರೆದು, ಜಗತ್ತಿನ ಕಾದಂಬರಿ ಬರವಣಿಗೆಯ ದಿಕ್ಕನ್ನೇ ಬದಲಿಸಿದವನು ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಜ್. ಕಾದಂಬರಿಗೆ ನೊಬೆಲ್ ಪ್ರಶಸ್ತಿ ಬಂತು. ಆಮೇಲೆ 'ಲವ್ ಇನ್ ದ ಟೈಮ್ ಆಫ್